

ಇದ್ದನು. ಊಟ ತುಂಬಿಕೊಂಡು ಬರಲು ಅಂತೇಳಿಯೇ ಗಂಡಂದಿರ ಗೊರ್ಬುಗಳ ಚಂಚಿಕೊಂಡು ಮಳೆಯ ಆಚೀಚೆಗೆ ಸರಿಸಿ ದಾರಿ ಮಾಡಿಕೊಂಡು ಊರಿನತ್ತ ನಡೆದರು. ಮೂರ್ಜನ ಗಂಡಸರು ಊಟ ಬರುವಾಗ ಅರ್ಧ ದಾರಿಗೆ ಬಂದು ಕಾಯುತ್ತಿರಬೇಕು ಅಂತ ಮಾತಾಗಿತ್ತು.

ಮೂರೂವರೆ ಗೊರ್ಬುಗಳು ಊರ ಬಾಗಿಲಿನಂತಿದ್ದ ಕಲ್ಕುಟ್ಕನ ಮನೆ ಹತ್ತಿರ ಬಪ್ಪ ಹೊತ್ತಿಗೆ ಶಾಲೆ ಮಕ್ಕಳು ಕೊಡೆ ಹಿಡಿದು ಮನೆ ಕಡೆಗೆ ಹೊರಟದ್ದರು. ಶಾಲೆ ಮಕ್ಕಳನ್ನು ನೋಡಿದ ಗೊರ್ಬುಗಳು ಅವರು ಮರೆಯಾಗುವವರೆಗೂ ಹಳುವಿನ ಅಡ್ಡ ನಿಂತವು. ಆ ಗೊರ್ಬಿನೊಳಗಿದ್ದ ಬೇಡುಗೆ ಅಬ್ಬಿದಿಕ್ಕಳು ಹಳುವಿನ ಅಡ್ಡ ಅಂಡ್ಕಂಡು ನಿಂತದ್ದು ಕಂಡು ವಿಷಯ ಎಂತ ಅಂತ ಗೊತ್ತಾಗಿಲಿಲ್ಲ. ಆದರೆ ಬೇಡುಗೆ ಒಂದು ಹಳುವಿನ ಗಮ್ಮತ್ತು ನೆನಪಾಯ್ತು.

ಅದು ಬ್ಯಾಸ್ಗೆ ಟೈಮು. ಈ ಬೇಡುಗೆ ಹಳುವಿಗೆ ಕಲ್ಲು ಕುಟ್ಟುವುದೆಂದರೆ ಭಾರೀ ಕುಶಿ. ಹಾಡಿ ತುಂಬಾ ಚೂರಿ ಮುಳ್ಳಿನ ಕೊಕ್ಕೆ ಇದ್ದರೂ ಒಂದು ಸಲವೂ ಕೊಕ್ಕೆಗೆ ಸಿಕ್ಕಿ ಹಾಕಿಕೊಳ್ಳದ ಹುಡ್ಗ ಚೀಪ್ಕರೆ, ಗರ್ಚ, ಸೆಳ್ಳೆ, ಬುಕ್ಕಿ, ಮಡ್ಕಿ ಹಣ್ಣು, ಮುರಿನ್ ಹಣ್ಣು ಹುಡುಕುತ್ತಾ ನೆಡ್ದು ನೆಡ್ದು ಹಾಡಿಯ ತುಂಬಾ ಕಾಲು ಹಾದಿಯ ನರಮಂಡಲ ರಚಿಸಿದ್ದ. ಆ ಹಾದಿಗಳು ಆಯಾಯ ಕಾಲಕ್ಕೆ ಹಣ್ಣು ಬಿಡುವ ಗಿಡದ ಬುಡಕ್ಕೆ ಬೇಡುವನ್ನು ತಲುಪಿಸುತ್ತಿದ್ದವು.

ಹಾಗೆ ಒಬ್ಬನೇ ತಿರುಗಾಡುವಾಗ ಬೇಜಾರಾದ್ರೆ ಗನಾ ಕಲ್ಲು ಎತ್ತಿಕೊಂಡು ಹಳುವಿಗೆ ಇಲ್ಲಾ ಯಾವುದಾದರೂ ಗುತ್ತಿಗೆ ಹೊಡೆದು ಜೋರಾಗಿ ನೆಗಿಯಾಡುತ್ತಿದ್ದ. ಮಗು ತನ್ನನ್ನು ನೋಡಿ ನೆಗಿ ಆಡ್ವ ಕುಶಿಯ ಕಂಡು ಆ ಹಳು, ಗುತ್ತಿಗಳು ಅಲ್ಲಾಡಿ ತಾವೂ ನೆಗಿಯಾಡುತ್ತಿದ್ದವು. ಬೇಡುವಿನ ಕಲ್ಲಿನ ಹೊಡೆತಕ್ಕೆ ಒಂದು ಸಲ ಹಳುವೊಂದು ರಕ್ತ ಸುರಿಸಿಕೊಂಡು ಓಡಿ ಹೋಗಿತ್ತು.

ಎಂದಿನಂತೆ ತನ್ನ ನರಮಂಡಲದಲ್ಲಿ ಸಂಚರಿಸುತ್ತಿದ್ದ ಬೇಡುಗೆ ಭಯಂಕರ ಬೇಜಾರಾಗಿತ್ತು. ಒಂದು ಬೊಡ್ರಾಸ್ ಕಲ್ಲು ಎತ್ತಿ ದೊಡ್ಡ ಹಳುವಿಗೆ ಬಾರಿಸಿಬಿಟ್ಟ.